ಲಕ್ಷ ರೂಪಾಯಿಗಳಿಗೋಸ್ಕರ ಕೇಂದ್ರ ಸರ್ಕಾರದ ರಾಷ್ಟ್ರೀಯ ಏರ್‌ಪೋರ್ಟ್ ಅಥಾರಿಟಿಯವರಿಗೆ ಪತ್ರವನ್ನು ಬರೆಯಲಾಗುತ್ತದೆ. ಅವರಿಂದ ಉತ್ತರ ಬಂದಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಇದನ್ನು ನಾವು ಫ್ಯಾಕ್ಸ್ ಮುಖಾಂತರ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ. ಅವರು ಹಣವನ್ನು ಕೊಡುವುದಕ್ಕೆ ಆಗುವುದಿಲ್ಲವೆಂದರೆ ನಾವು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**(ಈ) ಕಬ್ಬು ಕಾರ್ಖಾನೆಯಲ್ಲಿ ಕಬ್ಬು ಅರೆಯುವ ದಿನವನ್ನು ವಿಸ್ತರಿಸುವ ಬಗ್ಗೆ**

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಕಬ್ಬು ಕಾರ್ಖಾನೆಯ ವಿಚಾರವಾಗಿ ಉತ್ತರ ಬಂದಿದೆ, ಅದರ ಬಗ್ಗೆ ಸರ್ಕಾರದಿಂದ ಉತ್ತರ ಕೊಡಿಸಿ.

ಅಧ್ಯಕ್ಷರು : ಆಯಿತು.

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಈ ಸಾಲಿನಲ್ಲಿ ಎಂಟು ಲಕ್ಷದ ಅರವತ್ತು ಸಾವಿರ ಟನ್ ಕಬ್ಬು ನೋಂದಾಯಿಸಿದ್ದಾರೆ. 8 ಲಕ್ಷ 11 ಸಾವಿರ ಟನ್ ಕಬ್ಬು ಅರೆದಿದ್ದಾರೆ, ಉಳಿದಂತಹ 49 ಸಾವಿರ ಟನ್ ನೋಂದಾಯಿತ ಕಬ್ಬನ್ನು ಅರೆಯುವಂಥಾದ್ದಕ್ಕೆ ದಿ : 31.3.99ರವರೆಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

**(ಉ) ತೀರ್ಥಹಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರ ನೇಮಕ**

+ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡುವ ವಿಷಯಕ್ಕೆ ಸಂಬಂಧಪಟ್ಟ ಆರೋಗ್ಯ ಸಚಿವರು ಸಭೆಯಲ್ಲಿ ಇಲ್ಲ. ಆದರೂ ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ, ಅವರು ನಮ್ಮ ಕ್ಷೇತ್ರದ ಕಷ್ಟವನ್ನು ಅರ್ಥಮಾಡಿಕೊಳ್ಳುತ್ತಾರೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರದ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗೆ ಬಂದಂಥ ಮಹಿಳೆಗೆ ಅಲ್ಲಿರತಕ್ಕಂಥ ಸಿಬ್ಬಂದಿ ವರ್ಗದವರು ಹಿಂಸೆ ಕೊಟ್ಟು ಆ ಮಹಿಳೆ ಮರಣವಪ್ಪುವ ಹಾಗೆ ಮಾಡಿದ್ದಾರೆ ಎಂದು ನಾನು ಒಂದು ವರ್ಷದ ಹಿಂದೆ ಇದೇ ಶಾಸನ ಸಭೆಯಲ್ಲಿ ಚರ್ಚೆ ಮಾಡಿದ್ದೆ. ಸರ್ಕಾರ ತನಿಖೆ ಮಾಡಿ ಅಲ್ಲಿರುವಂಥ ನಾಲ್ಕು ಜನ ದಾದಿಯರನ್ನು ಮತ್ತು ಒಬ್ಬ ಮಹಿಳಾ ವೈದ್ಯರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿತ್ತು. ಇತ್ತೀಚೆಗೆ ಸರ್ಕಾರ ಆದೇಶ ಮಾಡಿ ಅವರೆಲ್ಲರನ್ನೂ ಕೂಡ ಪುನಃ ಕೆಲಸಕ್ಕೆ ನೇಮಕ ಮಾಡಿಕೊಂಡಿದ್ದಾರೆ. ಕಳೆದ ಒಂದು ವರ್ಷದಿಂದ ನಮ್ಮ ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರು, ಮಹಿಳಾ ವೈದ್ಯರು ಇಲ್ಲ. ಇದರ ಪರಿಣಾಮ ಏನಾಗಿದೆ ಎಂದರೆ, ಪ್ರತಿದಿವಸ ಸುಮಾರು 200 ರಿಂದ 250 ರೋಗಿಗಳು, ವಿಶೇಷವಾಗಿ ದಲಿತ ಮಹಿಳೆಯರು ಮತ್ತು ಬಡವರು ನಮ್ಮ ತೀರ್ಥಹಳ್ಳಿಯ ಜೆ.ಸಿ.ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬರುತ್ತಾರೆ. ಕೇವಲ ತೀರ್ಥಹಳ್ಳಿಯಿಂದ ಮಾತ್ರವಲ್ಲ, ಹೊಸನಗರ, ಎನ್.ಆರ್.ಪುರ, ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳಿಂದಲೂ ಕೂಡ ಬಡವರು ಚಿಕಿತ್ಸೆಗಾಗಿ ಅಲ್ಲಿಗೆ ಬರುತ್ತಾರೆ. ಅವರು ಇವತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಆಗುತ್ತಿಲ್ಲ. ಮಹಿಳೆಯರಿಗೆ ಹೆರಿಗೆ ಇವತ್ತು ಆಸ್ಪತ್ರೆಯಲ್ಲಿ ಆಗುತ್ತಿಲ್ಲ. ಇದರ ಪರಿಣಾಮವಾಗಿ ಕಳೆದ ಎರಡು ವಾರದ ಹಿಂದೆ ಒಬ್ಬ ದಲಿತ ಮಹಿಳೆಗೆ